ಬಾದಾಮಿ ತಾಲ್ಲೂಕಿನಲ್ಲಿ ಜಮೀನಿನ ಲೀಜ್ ವಿಚಾರ

೩೩೨ (೬೪೦) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಸಣ್ಣ ಪ್ರಮಾಣದ ಉದ್ಯಮಗಳು, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ: —

ಅ) ಎಸ್. ಎಸ್. ನರಸಣಗಿ ಎಂಬುವರಿಗೆ ಬಾದಾಮಿ ತಾಲ್ಲೂಕಿನಲ್ಲಿ ಗುತ್ತಿಗೆಯ, ಆಧಾರದ ಮೇಲೆ ಜಮೀನು ಮಂಜೂರು ಮಾಡಿದ್ದು ನಿಜವೇ ?

ಆ) ಆ ರೀತಿ ಅವರಿಗೆ ಮಂಜೂರು ಮಾಡಲಾದ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು ?

ಇ) ಜಮೀನಿನ ಒಡೆಯರಿಗೆ ತಿಳಿಯದಂತೆ ಲೀಜ್ ಮಾಡಿರುವುದು ನಿಜವೇ ?

ಈ) ಈ ರೀತಿ ಲೀಜ್ ಕೊಡುವಾಗ ಇರುವ ಸಾಮಾನ್ಯ ನಿಯಮಗಳೇನು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಕೈಗಾರಿಕೆ ಮತ್ತು ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಇಲ್ಲ. ಎಸ್. ಎಸ್. ನರಸಣಗಿಯವರಿಗೆ ೧೯೮೨ರಲ್ಲಿ ಗಣಿ ಗುತ್ತಿಗೆ ಮಂಜೂರು ಮಾಡಿರುವುದು ನಿಜ.

ಆ) ೨೫೦ ಎಕರೆ.

ಇ) ೧೯೮೧–೮೨ರಲ್ಲಿ ಚಾಲ್ತಿಯಲ್ಲಿದ್ದ ನಿಯಮದಂತೆ ಜಿಲ್ಲಾಧಿಕಾರಿಗಳ ಒಪ್ಪಿಗೆ ಪಡೆದು ಗುತ್ತಿಗೆಯನ್ನು ಮಂಜೂರು ಮಾಡಲಾಗಿದೆ. ಆಗ ಚಾಲ್ತಿಯಲ್ಲಿದ್ದ ನಿಯಮಗಳ ಪ್ರಕಾರ ಗಣಿ ಗುತ್ತಿಗೆ ಮಂಜೂರು ಮಾಡಲು ಜಮೀನುದಾರರ ಪೂರ್ವಾನುಮತಿ ಬೇಕಾಗಿರಲಿಲ್ಲ.

ಈ) ಖನಿಜ ರಿಯಾಯಿತಿ ನಿಯಮ ೧೯೬೦ ಮತ್ತು ಎಂ. ಎಂ. (ಆರ್ ಅಂಡ್ ಡಿ) ಆಕ್ಟ್ ೧೯೫೭ರ ನಿಯಮಗಳನ್ನಾಧರಿಸಿ.

ಚಕ್ರ ಆಣೆಕಟ್ಟಿಗೆ ತಗುಲಿದ ವೆಚ್ಚ

೩೩೪ (೬೩೪) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ನಿರ್ಮಿಸಿರುವ ಚಕ್ರಾ ಆಣೆಕಟ್ಟಿಗೆ ತಗುಲಿದ ವೆಚ್ಚವೆಷ್ಟು ?

ಆ) ಚಕ್ರಾ ಆಣೆಕಟ್ಟು ಬಿರುಕು ಬಿಟ್ಟಿರುವುದು ನಿಜವೇ ?

ಇ) ಬಿರುಕು ಬಿಟ್ಟಿದ್ದರೆ, ಇದಕ್ಕೆ ಸಂಬಂಧಪಟ್ಟವರ ಮೇಲೆ ಕೈಗೊಂಡ ಕ್ರಮವೇನು ?

ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಚಕ್ರಾ ಆಣೆಕಟ್ಟಿಗೆ ತಗುಲಿದ ವೆಚ್ಚ ೧೭.೩೦ ಕೋಟಿ ರೂ. ಗಳು

ಆ) ಆಣೆಕಟ್ಟು ಬಿರುಕು ಬಿಟ್ಟಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಸರಬರಾಜು ಬಗ್ಗೆ

೩೩೫ (೬೩೭) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—